ಸೆಲೆಬ್ರಿಟಿ

■ ಹನಿ

# ಭಾರತ ರತ್ನ ಚೆಂಡೂಲ್ಕರ್!

ವಾರ ಪೂರ್ತಿ ಬರೀ ಸಚಿನ್ ತೆಂಡೂಲ್ಕರ್! ಪತ್ರಿಕೆಗಳಲ್ಲಿ, ಟಿವಿಗಳಲ್ಲಿ, ಅಂತರ್ಜಾಲದಲ್ಲಿ ಎಲ್ಲಿ ನೋಡಿದರೂ ಬರೀ ತೆಂಡೂಲ್ಕರ್! ಚೆಂಡು ಇರುವುದೇ ಹೊಡೆಯುವುದಕ್ಕೆಂದು ಭಾವಿಸಿ ರನ್ ಪರ್ವತವನ್ನೇ ಪೇರಿಸಿದ 'ಚೆಂಡೂ'ಲ್ಕರ್! ಜಗತ್ತಿನ ಯಾವ ಕ್ರೀಡಾಪಟುವಿಗೂ ಇಷ್ಟೊಂದು ಭರ್ಜರಿ ವಿದಾಯ ದೊರೆತಿರಲಿಲ್ಲ. ಮುಂಬೈಯ ವಾಂಖೆಡೆ ಸ್ಟೇಡಿಯಂನಲ್ಲಿ ತನ್ನ ಕೊನೆಯ ಟೆಸ್ಟ್ ಪಂದ್ಯವಾಡಿದ ಸಚಿನ್ ತೆಂಡೂಲ್ಕರ್, 74 ರನ್‌ಗಳನ್ನು ಬಾರಿಸಿದರೂ ಒಂದೇ ಒಂದು ಸಿಕ್ಸರ್ ಹೊಡೆಯಲಿಲ್ಲ. ಆದರೆ ಕಿಕ್ಕಿರಿದು ಸೇರಿದ್ದ ಪ್ರೇಕ್ಷಕರಿಗೆ ಅದರ ಪರಿವೇ ಇಲ್ಲ! ಸಚಿನ್ ಒಂದು ರನ್ ಹೊಡೆದರೂ, ಡಿಫೆನ್ಸ್ ಆಡಿದರೂ ಅವರದ್ದು ಅದೇ ಕೇಕೆ, ಹರ್ಷೋದ್ಗಾರ! ಯಾಕೆಂದರೆ ಸಚಿನ್ ಕ್ರಿಕೆಟ್ 'ದೇವರು!'



ಸಚಿನ್ ನಿಜಕ್ಕೂ ತುಂಬ ಅದೃಷ್ಟವಂತ. ಹಾಕಿ (ಧ್ಯಾನ್‌ಚಂದ್), ಬಾಕ್ಸಿಂಗ್ (ಮೊಹಮ್ಮದ್ ಅಲಿ), ಟೆನಿಸ್ (ಮಾರ್ಟಿನಾ), ಗಾಲ್ಫ್ (ಟೈಗರ್ ವುಡ್ಸ್), ಫುಟ್‌ಬಾಲ್ (ಮರಡೋನಾ) ಮುಂತಾಗಿ ಹಲವು ಕ್ರೀಡೆಗಳಲ್ಲಿ ಸಚಿನ್‌ರನ್ನೂ ಮೀರಿಸುವ ಸ್ಟಾರ್‌ಗಳು ಬಂದು ಹೋದರೂ ಅವರು ಯಾರೂ 'ದೇವರು' ಆಗಲಿಲ್ಲ. ಕ್ರಿಕೆಟ್‌ನಲ್ಲಿ ಇವತ್ತಿಗೂ ಡಾನ್ ಬ್ರಾಡ್ಮನ್ ಅವರ ಧೈರ್ಯವಂತ ಮತ್ತು ಕಲಾತ್ಮಕ ಆಟವನ್ನು ಸರಿಗಟ್ಟಿದ ಇನ್ನೊಬ್ಬರಿಲ್ಲ– ಆದರೆ ಅವರೂ 'ದೇವರು' ಅಲ್ಲ! 'ದೇವರ' ಪಟ್ಟ ಏನಿದ್ದರೂ ಸಚಿನ್‌ಗೆ ಮಾತ್ರ ಮೀಸಲು.

ಕೊನೆಯ ಟೆಸ್ಟ್‌ನಲ್ಲಿ ಸಚಿನ್ ಸೆಂಚುರಿ ಹೊಡೆಯುತ್ತಾರೆಂದು ಲಕ್ಷಾಂತರ ಅಭಿಮಾನಿಗಳು ಕಾದಿದ್ದರು. ಆದರೆ ಕ್ರಿಕೆಟ್ 'ದೇವರಿ'ಗೂ ಅದು ಸಾಧ್ಯವಾಗಲಿಲ್ಲ. ಕ್ರೀಡಾಂಗಣದಲ್ಲಿ 40 ಸಾವಿರ ಜನರಿಗೆ ಕುಳಿತುಕೊಳ್ಳಲು ಟಿಕೆಟ್ ಇದ್ದರೂ, ಸಾರ್ವಜನಿಕರಿಗೆ ಮಾರಾಟಕ್ಕೆ ಇದ್ದದ್ದು 5 ಸಾವಿರ ಟಿಕೆಟ್‌ಗಳು ಮಾತ್ರ. ಉಳಿದದ್ದೆಲ್ಲ ವಿಐಪಿ ಗಳ ಪಾಲು! ಅಂದರೆ ಸಚಿನ್‌ರ ಬಡಪಾಯಿ ಅಭಿಮಾನಿಗಳಿಗೆ ನೇರ ಆಟ ನೋಡುವ ಅದೃಷ್ಟ ಸಿಗಲೇ ಇಲ್ಲ. ಅವರೇನಿದ್ದರೂ ಟಿವಿ ಮುಂದಿನ ಭಕ್ತರು. ಸಚಿನ್ ವಿದಾಯದ ವೇದಿಕೆಯ ಮೇಲೆ ಇದ್ದವರೆಲ್ಲಾ ರಾಜಕಾರಣಿಗಳೇ. ಅವರಿಗೂ ಕ್ರಿಕೆಟ್‌ಗೂ ಇರುವುದು ಹಣದ ಸಂಬಂಧ ಮಾತ್ರ. ವಿದಾಯದ ಪಂದ್ಯದಲ್ಲಿ ಪ್ರಾಯೋಜಕರಿಗೆ ಭರ್ಜರಿ ವ್ಯಾಪಾರ. 'ಸಚಿನ್ ಕೊನೆಯ ಕ್ರಿಕೆಟ್ ಟೆಸ್ಟ್ ಎನ್ನುವುದು ಬರೀ ವ್ಯಾಪಾರ ಆಯಿತೆ.. ' ಎನ್ನುವ ಪ್ರಶ್ನೆಯೂ ಹುಟ್ಟಿಕೊಂಡಿತು.

ಕ್ರಿಕೆಟ್‌ನಲ್ಲಿ ಅತ್ಯಧಿಕ ರನ್ ಗಳಿಸಬೇಕೆಂದರೆ ಬ್ಯಾಟ್ಸ್‌ಮನ್ ಆಟಕ್ಕೆ ಇಳಿಯುವ ಕ್ರಮಾಂಕವೂ ಮುಖ್ಯ ಅನ್ನುತ್ತಾರೆ. ಆ ವಿಷಯದಲ್ಲೂ ಸಚಿನ್ ಲಕ್ಕಿಯೇ. ಆತನದ್ದು 4ರ ಕ್ರಮಾಂಕ. ಅಷ್ಟು ಹೊತ್ತಿಗೆ ಎದುರಾಳಿ ತಂಡದ ಅತ್ಯುತ್ತಮ ವೇಗದ ಬೌಲರ್‌ಗಳ ಒಂದು ಸುತ್ತು ಮುಗಿದಿರುತ್ತದೆ. ರನ್ ಗಳಿಸುವುದೂ ಸುಲಭ! ಆಟಗಾರನಾಗಿ ಸಚಿನ್ ಮೀರಿಸುವವರಿಲ್ಲ. ಆದರೆ ಕಪ್ತಾನನಾಗಿ ಸಚಿನ್ ಫೇಲ್ ಆದವರು. ನಾಯಕನಾಗಿದ್ದ 25 ಟೆಸ್ಟ್‌ಗಳಲ್ಲಿ ಗೆದ್ದದ್ದು 4 ಮಾತ್ರ, ಸೋತಿದ್ದು 9. ಹಾಗೆಯೇ 66 ಏಕದಿನ ಪಂದ್ಯಗಳಲ್ಲಿ ಭಾರತ ಸೋತದ್ದು 43!

ಈ ಕೊಂಕು ಮಾತುಗಳೆಲ್ಲ ಏನೇ ಇದ್ದರೂ ಸಚಿನ್ ಖಂಡಿತವಾಗಲೂ ಆಲ್‌ಟೈಮ್ ಬೆಸ್ಟ್. 'ಭಾರತ ರತ್ನ' ಪ್ರಶಸ್ತಿ ಪಡೆಯಲು ಎಲ್ಲ ರೀತಿಯಿಂದಲೂ ಅರ್ಹ. ಹತ್ತನೇ ವಯಸ್ಸಿನಲ್ಲಿಯೇ ಟೆಸ್ಟ್ ಪಂದ್ಯದಲ್ಲಿ ಸ್ಥಾನ ಸಿಕ್ಕರೂ ಇನ್ನೊಬ್ಬ ಸಚಿನ್ ಹುಟ್ಟಲು ಸಾಧ್ಯವಿಲ್ಲ. ಸಚಿನ್ ಮಾಡಿದ ದಾಖಲೆಗಳನ್ನು ಸರಿಗಟ್ಟಲೂ ಸಾಧ್ಯವಿಲ್ಲ. ಕಳೆದ 24 ವರ್ಷಗಳಲ್ಲಿ ಕ್ರಿಕೆಟ್ ಭಾರತೀಯರ ಉಸಿರಾಟವೇ ಎಂಬಂತೆ ಜನಪ್ರಿಯ ಆಗಿದ್ದರೆ, ಕೋಟ್ಯಂತರ ಕ್ರಿಕೆಟ್ ಅಭಿಮಾನಿಗಳು ಹುಟ್ಟಬೇಕಿದ್ದರೆ ಅದರಲ್ಲಿ ಸಚಿನ್ ಆಟದ ಪಾಲು ಅತ್ಯಂತ ದೊಡ್ಡದು.

ಅದಕ್ಕಿಂತ ಮುಖ್ಯವಾಗಿ, ಇನ್ನಾರೂ ಏರಲಾಗದಷ್ಟು ಕೀರ್ತಿಶಿಖರದ ಉತ್ತುಂಗಕ್ಕೆ ಏರಿದರೂ ಸಚಿನ್ ತನ್ನ ಮುಗ್ಧತೆಯನ್ನು ಕಳೆದುಕೊಳ್ಳಲಿಲ್ಲ. ಅದೇ ಮಗುವಿನ ನಗು, ಸಭ್ಯ ಆಟ ಮತ್ತು ಪ್ರಾಮಾಣಿಕ ನಡೆ. ಸಿನಿಮಾ, ಕ್ರೀಡೆ ಮತ್ತು ರಾಜಕೀಯ ರಂಗಗಳಲ್ಲಿ ಪುಡಿ ತಾರೆಯರಾದವರೂ ಅಮಲು ತಲೆಗೇರಿ, ಯದ್ವಾತದ್ವಾ ವರ್ತಿಸಿದ ನೂರೆಂಟು ಉದಾಹರಣೆಗಳಿವೆ. ಆದರೆ ಈ ವಿಷಯದಲ್ಲಿ ಸಚಿನ್ ಅಪ್ಪಟ ಚಿನ್ನ. ಹಾಗಾಗಿಯೇ ಸಚಿನ್ ವಿದಾಯ ಎನ್ನುವುದು ಅಂತರರಾಷ್ಟ್ರೀಯ ಸುದ್ದಿ. ಹ್ಯಾಟ್ಸಾಫ್ ಭಾರತ ರತ್ನ! ●

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65